


# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೧೦



ಕೆಲವು ದಿನಗಳಲ್ಲಿ ಭಕ್ತಮಾಲನಿಂದ ಗೋಕುಲದ ಒಬ್ಬ ಪರಮಹಂಸರ ಬಗ್ಗೆ ಕೇಳಿ, ಅವರ ದರ್ಶನ ಮಾಡಲು ಮೂವರೂ ಹೊರಟರು. ಪರಮಹಂಸಜೀ ಇವರುಗಳನ್ನು ಬಹಳ ಗೌರವದಿಂದ ಬರಮಾಡಿಕೊಂಡು, ತಮ್ಮ ಆಶ್ರಮದಲ್ಲಿ ಇರಿಸಿಕೊಂಡರು. ಅಲ್ಲಿಯ ಜನರು ಪರಮಹಂಸರ ವಯಸ್ಸಿನ ಬಗ್ಗೆ ಸೋಜಿಗದ ಮಾತುಗಳನ್ನಾಡುತ್ತಿದ್ದರು. ಕೆಲವು ವೃದ್ಧರು, 'ಚಿಕ್ಕಂದಿನಿಂದಲೂ ಅವರನ್ನು ಈಗ ಇರುವಂತೆ, ಒಂದೇ ರೀತಿಯಾಗಿ ನೋಡುತ್ತಿದ್ದೇವೆ' ಎನ್ನುತ್ತಿದ್ದರು. ಮತ್ತೆ ಕೆಲವರು, ತಮ್ಮ ಮುತ್ತಜ್ಜನ ಬಾಯಿಯಿಂದಲೂ ಸಹ ಅವರ ಬಗ್ಗೆ ಕೇಳಿದ್ದಾಗಿ ಹೇಳುತ್ತಿದ್ದರು. ಅಂದರೆ ಪರಮಹಂಸರ ವಯಸ್ಸು ೧೫೦-೨೦೦ ವರ್ಷಗಳೆಂದೇ ಹೇಳಬಹುದು. ಒಳ್ಳೆಯ ಆಜಾನುಬಾಹು, ಬಲಿಷ್ಠವಾದ ದೇಹ, ಕೂದಲು ಸಹ ಬೆಳ್ಳಗಾಗಿಲ್ಲ. ಈಗಲೂ ಅವರು ನಿಯಮಿತವಾಗಿ ವ್ಯಾಯಾಮ ಮಾಡುತ್ತಾರೆ. ಪರಮಹಂಸಜೀ ಭಕ್ತರೂ ಹೌದು, ಜ್ಞಾನಿಯೂ ಹೌದು. ಧಾರ್ಮಿಕ ವಿಷಯದಲ್ಲಿಯೂ ಅವರ ದೃಷ್ಟಿಕೋನ ಉದಾರವಾಗಿತ್ತು. ಈ ಮೂವರು ಮಹಾರಾಜರ ಬಾಯಿಯಿಂದ ಠಾಕೂರ್ ಮತ್ತು ಸ್ವಾಮೀಜಿಯವರ ವಿಷಯವನ್ನು ಕೇಳಿ ಅವರು ತುಂಬ ಆನಂದಪಟ್ಟರು. ಅವರ ದಿನಚರಿ ತುಂಬ ಚೆನ್ನಾಗಿತ್ತು. ಮುಂಜಾನೆಗೂ ಮೊದಲೇ ಎದ್ದು, ಶಿಷ್ಯರೊಡಗೂಡಿ ಜಪ-ಧ್ಯಾನದಲ್ಲಿ ತೊಡಗುತ್ತಿದ್ದರು. ಆಶ್ರಮದಲ್ಲಿ ಬೇರೆ ಕೆಲಸದವರಾರೂ ಇರಲಿಲ್ಲ. ಅಲ್ಲಿದ್ದ ೧೨-೧೩ ಶಿಷ್ಯರೇ ಎಲ್ಲ ಕೆಲಸಗಳನ್ನೂ ಹಂಚಿಕೊಂಡು ಮಾಡುತ್ತಿದ್ದರು. ೩-೪ ಜನರು ಅಡುಗೆಮನೆಯ ಕೆಲಸ ನೋಡಿಕೊಳ್ಳುತ್ತಿದ್ದರೆ, ಇತರ ೩-೪ ಜನರು ದೊಡ್ಡ ಜೋಳಿಗೆಯೊಂದನ್ನು ಹಿಡಿದುಕೊಂಡು ಭಿಕ್ಷೆಗೆ ಹೊರಗೆ ಹೋಗುತ್ತಿದ್ದರು. ನಿತ್ಯವೂ ಆಶ್ರಮದಲ್ಲಿ ೫೦-೬೦, ಕೆಲವೊಮ್ಮೆ ೧೦೦ ಜನ ಅತಿಥಿಗಳು, ಬೈರಾಗಿಗಳು ಮಧ್ಯಾಹ್ನದ ಹೊತ್ತು ತೃಪ್ತಿಯಿಂದ ಊಟ ಮಾಡುತ್ತಿದ್ದರು. ಪರಮಹಂಸಜೀ ತಾವೇ ಸ್ವತಃ ನಿಂತು ಅದರ ಮೇಲ್ವಿಚಾರಣೆ ಮಾಡುತ್ತಿದ್ದರು. ಪರಮಹಂಸರ ಆಹಾರದಲ್ಲಿ ಯಾವ ರೀತಿಯ ವಿಶೇಷತೆಯೂ ಇರಲಿಲ್ಲ, ಎಲ್ಲರೂ ಏನು ಊಟ ಮಾಡುತ್ತಿದ್ದರೋ ಅದನ್ನೇ ಅವರೂ ಸ್ವೀಕರಿಸುತ್ತಿದ್ದರು. ಊಟ, ವಿಶ್ರಾಂತಿಯ ನಂತರ ೩ ಗಂಟೆಯ ಹೊತ್ತಿಗೆ ಎಲ್ಲರನ್ನೂ ಸೇರಿಸಿಕೊಂಡು 'ಅಧ್ಯಾತ್ಮ ರಾಮಾಯಣ'ವನ್ನು ಭಾಷ್ಯಸಮೇತ ಹಿಂದಿಯಲ್ಲಿ ವ್ಯಾಖ್ಯಾನಿಸುತ್ತಿದ್ದರು. ಬಾಬುರಾಮ್ ಮಹಾರಾಜ್ ಮತ್ತು ಕಾಳೀಕೃಷ್ಣರು ಅಲ್ಲಿದ್ದಷ್ಟು ದಿನವೂ ಪರಮಹಂಸಜೀ ಅವರೆಲ್ಲರನ್ನೂ ಸಂಗಡ ಕರೆದುಕೊಂಡು, ಸಂಜೆ ತಿರುಗಾಡಿ ಬರುತ್ತಿದ್ದರು. ಅಂಗಡಿಗಳಿರುವ ಬೀದಿಗೇನಾದರೂ ಹೋದರೆ, ರಸ್ತೆಯ ಎರಡು ಬದಿಯ ವ್ಯಾಪಾರಿಗಳೂ ಹೊರಗೆ ಬಂದು ಭಕ್ತಿಗೌರವಗಳಿಂದ ಕೈ ಮುಗಿದು ನಿಲ್ಲುತ್ತಿದ್ದುದನ್ನು ಕಾಣಬಹುದಿತ್ತು. ಒಂದು ದಿನ ಪರಮಹಂಸಜೀ ತಮ್ಮ ಗೋಶಾಲೆಯನ್ನು ತೋರಿಸಿಕೊಂಡು ಬರಲು ಈ ಮೂವರನ್ನು ಕರೆದೊಯ್ದರು. ಸುಮಾರು ಒಂದೂವರೆ ಮೈಲಿ ದೂರದಲ್ಲಿ ಆ ಗೋಶಾಲೆ ಇತ್ತು. ಅಲ್ಲಿನ ರೈತರ, ಸಾಹು

ಕಾರರ ಮುದಿ ಹಾಗೂ ಯಾವುದೇ ಕೆಲಸ ಮಾಡಲು ಅಶಕ್ಯವಾಗಿದ್ದ ದನ, ಎತ್ತುಗಳು ಈ ಗೋಶಾಲೆಯಲ್ಲಿ ಆಶ್ರಯ ಪಡೆಯುತ್ತಿದ್ದವು. ಪರಮಹಂಸರ ಇಬ್ಬರು ಶಿಷ್ಯರನ್ನು ಈ ಗೋವುಗಳ ಪರಿಚರ್ಯೆಗಾಗಿ ನೇಮಿಸಿದ್ದರು. ಇದನ್ನೆಲ್ಲಾ ನೋಡಿ ಬಾಬುರಾಮ್ ಮಹಾರಾಜರು ತುಂಬ ಆನಂದವನ್ನು ವ್ಯಕ್ತಪಡಿಸಿದರು. ಪರಮಹಂಸಜೀ ಆಶ್ರಮದಲ್ಲಿ ನಾಲ್ಕೈದು ದಿನಗಳಿದ್ದ ನಂತರ, ಶ್ರೀಕೃಷ್ಣನ ಅಣ್ಣ ಬಲರಾಮನ ಜನ್ಮಸ್ಥಳ 'ರಾವುಲ್'ನ ದರ್ಶನ ಮಾಡಿ ಬೃಂದಾವನಕ್ಕೆ ಹಿಂತಿರುಗಿದರು.

ಇದೇ ಸಮಯದಲ್ಲಿಯೇ ಕಾಳೀಕೃಷ್ಣರ ತಾಯಿ ಬೃಂದಾವನದ ಯಾತ್ರೆಗೆ ಬಂದಿದ್ದರು. ಕಾಲಾಬಾಬುವಿನ ಕುಂಜದ ಒಳಮನೆಯಲ್ಲಿ ಸುಮಾರು ಒಂದು ತಿಂಗಳು ವಾಸವಾಗಿದ್ದರು. ಅವರು ನಾನಾ ಪ್ರಕಾರದ ಪಲ್ಯಪದಾರ್ಥಗಳನ್ನು ತಯಾರಿಸಿ ಬಾಬುರಾಮ್ ಮಹಾರಾಜರಿಗೆ ಮತ್ತು ಕಾಳೀಕೃಷ್ಣರಿಗೆ ಬಡಿಸುತ್ತಿದ್ದರು. ಕುಂಜದ ಕಾವಲುಗಾರ ಹರಿಸಿಂಗ್ ಕಟ್ಟುಮಸ್ತಾದ ಆಳು, ತುಂಬ ಲಕ್ಷಣವಾಗಿದ್ದ. ಮಧುರಭಾಷಿ ಹಾಗೂ ಬಹಳ ಕಸರತ್ತು ಮಾಡುತ್ತಿದ್ದ. ಅವನು ದಿನವೂ ಸಂಜೆ ಕಾಳೀಕೃಷ್ಣರಿಗೆ 'ಸಿದ್ಧಿ'[೧] ತಯಾರಿಸಿ ಕೊಡುತ್ತಿದ್ದ; ಅದಕ್ಕಾಗಿ ಆಗಾಗ ಇನಾಮು ಕೇಳುತ್ತಿದ್ದ, ಕಾಳೀಕೃಷ್ಣರೂ ಕೊಡುತ್ತಿದ್ದರು. ಬೇಸಿಗೆಯ ಆ ಪ್ರಚಂಡ ಸೆಖೆಯಲ್ಲಿ ಸಿದ್ಧಿಯಿಂದಾಗಿ ಶರೀರವು ಸ್ವಲ್ಪ ತಂಪಾಗುತ್ತಿತ್ತು, ಹಸಿವೂ ಆಗುತ್ತಿತ್ತು. ಆದ್ದರಿಂದ ಒಂದು ಮಧ್ಯಮ ಗಾತ್ರದ ಕಮಂಡಲು ಭರ್ತಿ ಸಿದ್ಧಿಯನ್ನು ಕಾಳೀಕೃಷ್ಣರು ಪಾನ ಮಾಡುತ್ತಿದ್ದರು. ದಿನವೂ ಎರಡು ಬಾರಿ ಸ್ನಾನ ಮಾಡುತ್ತಿದ್ದರಿಂದ ಸಿದ್ಧಿಯಿಂದ ಮತ್ತೇರುತ್ತಿರಲಿಲ್ಲ. ಸಂಜೆ ಹೊತ್ತು ದೇವಾಲಯಗಳಿಗೆ ಹೋಗಿ ಬರುತ್ತಿದ್ದರು. ಕಾಳೀಕೃಷ್ಣರ ನೆನಪುಗಳಲ್ಲಿ:

''ಬೃಂದಾವನದ ಒಂದು ತುದಿಯಿಂದ ಹಿಡಿದು ಮತ್ತೊಂದು ತುದಿಯವರೆಗೆ ರಸ್ತೆ ಹಾಗೂ ಆಸುಪಾಸಿನಲ್ಲಿರುತ್ತಿದ್ದ ಪ್ರಸಿದ್ಧ ಮಂದಿರಗಳನ್ನು ಸಂದರ್ಶಿಸಿ, ರಾತ್ರಿ ೮ರ ವೇಳೆಗೆ ಹಿಂತಿರುಗುತ್ತಿದ್ದೆ. ಪ್ರತಿ ಮಂದಿರದಲ್ಲಿ ನಿತ್ಯವೂ ವಿಗ್ರಹವನ್ನು ಹೊಸ ವೇಷಭೂಷಣಗಳಿಂದ ಅಲಂಕರಿಸುತ್ತಿದ್ದರು. ಒಂದು ದಿನ ರಾಖಾಲನ (ಗೊಲ್ಲನ) ವೇಷವಾದರೆ ಇನ್ನೊಂದು ದಿನ ರಾಜವೇಷ, ಮತ್ತೊಂದು ದಿನ ನರ್ತಕನ ವೇಷ. ಕೆಲವೊಮ್ಮೆ ಚಿನ್ನದ ನಾನಾ ಬಗೆಯ ಅಲಂಕಾರ, ಮತ್ತೊಮ್ಮೆ ಸುಂದರವಾದ ಹೂಗಳ ಅಚ್ಚುಕಟ್ಟಾದ ಅಲಂಕಾರ. ಈ ಅಲಂಕಾರಗಳೆಲ್ಲ ಅದೆಷ್ಟು ಸೂಕ್ಷ್ಮ ನೈಪುಣ್ಯದಿಂದ ಕೂಡಿ ಕಲಾತ್ಮಕವಾಗಿರುತ್ತಿತ್ತೆಂದರೆ ಎಷ್ಟು ನೋಡಿದರೂ ಕಣ್ಣಿಗೆ ತೃಪ್ತಿಯಾಗುತ್ತಿರಲಿಲ್ಲ. ಕೆಲವೊಂದು ದೊಡ್ಡ ಮಂದಿರಗಳಲ್ಲಿ ಇಂಥ ಅಲಂಕಾರಗಳಲ್ಲಿ ಅವುಗಳದ್ದೇ ಆದ ವಿಶೇಷತೆ ಇರುತ್ತಿತ್ತು. ಅದೆಂಥ ಸೇವೆ, ಭಕ್ತಿಗಳ ಭಾವನೆ! ಬೇಸಗೆಯಲ್ಲಿ ಪ್ರತಿ ಮಂದಿರದಲ್ಲೂ ವಿಗ್ರಹದ ಮುಂದಿನ ಪ್ರಾಂಗಣದಲ್ಲಿ ಕಾರಂಜಿ ಚಿಮ್ಮುತ್ತಿತ್ತು. ಈ ಸಮಯದಲ್ಲೇ ಒಮ್ಮೆ 'ಫೂಲ್ ಬಂಗ್ಲಾ' ನಡೆಯುತ್ತಿತ್ತು. ಅಂದರೆ ಹೂವಿನಿಂದಲೇ ಮಂಟಪ, ವೇದಿಕೆ ಇತ್ಯಾದಿಗಳನ್ನು ರಚಿಸಿ ಅದರ ಮಧ್ಯದಲ್ಲಿ ಕಾರಂಜಿಯನ್ನು ಚಿಮ್ಮಿಸಿ ಅಪರೂಪದ ದೃಶ್ಯವನ್ನು ಸೃಷ್ಟಿಸುತ್ತಿದ್ದರು. ಲಾರ್ಡ್ ಕರ್ಜನನು ಸೇಠ್‌ಗಳ ಮಂದಿರವನ್ನು 'ಪೋರ್ಟ್' ಎಂದೂ, ಸಾಹ್‌ಜೀಗಳ ಮಂದಿರವನ್ನು 'ಟೆಂಪಲ್' ಎಂದೂ ಕರೆದಿದ್ದನು. ಸೇಠ್‌ಗಳ ಪೂಜೆ ಪುನಸ್ಕಾರದ ವ್ಯವಸ್ಥೆಯೆಲ್ಲ ಬಹಳ ಆಡಂಬರದ್ದು. ಸಾಹ್‌ಜೀಗಳದ್ದು ಎಲ್ಲದರಲ್ಲೂ ಕಲೆ ಹಾಗೂ ಸೌಂದರ್ಯದ ಕಡೆಗೇ ದೃಷ್ಟಿ.''

ಬೃಂದಾವನದಲ್ಲಿ ಕೆಲವು ತಿಂಗಳನ್ನು ಸಾಧಾರಣ ರೀತಿಯಲ್ಲಿ ನಿಯಮಿತವಾದ ಜಪ, ಧ್ಯಾನ ಮತ್ತು ದರ್ಶನಾದಿಗಳಲ್ಲಿ ಕಳೆದ ಮೇಲೆ, ಕಾಳೀಕೃಷ್ಣರ ಅಂತರ್ಯದಲ್ಲಿ ತಾವು ಮನೆಯಲ್ಲಿದ್ದಾಗ ಯಾವ ರೀತಿ ತೀವ್ರ ಸಾಧನೆಯನ್ನು ಮಾಡಿದ್ದರೋ ಅದೇ ರೀತಿ ಮತ್ತೆ ತೀವ್ರ ತಪಸ್ಸು ಮಾಡುವ ಇಚ್ಛೆ ಪ್ರಬಲವಾಯಿತು. ಅವರು ಇಳಿದುಕೊಂಡಿದ್ದ ಮನೆಯ ಹಿಂಭಾಗದಲ್ಲಿ ಅಂತಹುದೇ ಇನ್ನೊಂದು ದೊಡ್ಡ ಮನೆ ಖಾಲಿಯಾಗಿತ್ತು; ಕಾಳೀಕೃಷ್ಣರು ಈಗ ಒಬ್ಬರೇ ಇದ್ದುಕೊಂಡು ಆ ಮನೆಯಲ್ಲಿ ಸಾಧನೆಗೆ ತೊಡಗಿದರು. ಮೇಲ್ಛಾವಣಿಯಲ್ಲಿ ಕುಳಿತು ರಾತ್ರಿ ಬಹಳ ಹೊತ್ತಿನವರೆಗೂ ಜಪ ಮಾಡುತ್ತಿದ್ದರು. ಅನೇಕ ವೇಳೆ ಹೀಗಾದದ್ದುಂಟು: ಜಪ ಮಾಡಲು ಕುಳಿತಾಗ ಒಂದು ಸಣ್ಣ ಮಳೆ ಬಿತ್ತು; ಜಪದ ಸಂಖ್ಯೆ ಮುಗಿದಿರಲಿಲ್ಲ, ಆದ್ದರಿಂದ ಕಾಳೀಕೃಷ್ಣರು ಅಲ್ಲಿಂದ ಏಳದೆ ಮೈ- ಬಟ್ಟೆ ಯೆಲ್ಲಾ ತೊಯ್ದುಹೋಗಿ, ಅನಂತರ ಅಲ್ಲೇ ಮೈ ಒಣಗುತ್ತಿತ್ತು. ಈ ರೀತಿ ೨-೩ ತಿಂಗಳು ತೀವ್ರ ಸಾಧನೆ ಮಾಡಿದ್ದರ ಫಲವಾಗಿ ಕಾಳೀಕೃಷ್ಣರಿಗೆ ಮನೋದಾರ್ಢ್ಯ, ಆನಂದದ ಅನುಭವವಾಯಿತು. ಆದರೆ ಅದರಿಂದ ದೇಹ ತುಂಬ ದುರ್ಬಲವಾಯಿತು. ಹೃದಯದಲ್ಲಿ ಒಂದು ರೀತಿಯ ಅಸ್ವಸ್ಥತೆ ತೋರಿ ಬಂತು. ಬಾಬುರಾಮ್ ಮಹಾರಾಜರು ಚಿಂತೆಗೀಡಾಗಿ ಅವರನ್ನು ಒಂದು ದಿನ ಮಥುರೆಯಲ್ಲಿದ್ದ ಸಿವಿಲ್ ಸರ್ಜನ್ ಬಳಿಗೆ ಕರೆದುಕೊಂಡು ಹೋದರು. ಸರ್ಜನ್ ಕಾಳೀಕೃಷ್ಣರನ್ನು ಪರೀಕ್ಷಿಸಿ, ಹೃದಯ ಸ್ವಲ್ಪ ದುರ್ಬಲವಾಗಿದೆ ಎಂದು ತಿಳಿಸಿದರು. ವಿಶ್ರಾಂತಿ ಹಾಗೂ ಪುಷ್ಟಿಕರ ಆಹಾರ ತೆಗೆದುಕೊಳ್ಳುವಂತೆ ಸಲಹೆಯಿತ್ತರು. ಕಾಳೀಕೃಷ್ಣರು ಒಂದು ಸೇರು ಶುದ್ಧ ಹಾಲನ್ನು ಕುಡಿಯಲಾರಂಭಿಸಿದರು ಮತ್ತು ಜಪ, ಧ್ಯಾನದ ಸಮಯವನ್ನು ಕಡಿಮೆ ಮಾಡಿದರು. ಆದರೆ ಅದರಿಂದ ನಿರೀಕ್ಷಿಸಿದಂತಹ ಪರಿಣಾಮವೇನೂ ಕಂಡುಬರಲಿಲ್ಲ. ಸ್ವಾಮಿ ವಿಜ್ಞಾನಾನಂದರು ಆಗಿನ್ನೂ ಮಠವನ್ನು ಸೇರಿರಲಿಲ್ಲ, ಹರಿಪ್ರಸನ್ನ ಚಟ್ಟೋಪಾಧ್ಯಾಯ ಎಂಬ ತಮ್ಮ ಹಿಂದಿನ ಹೆಸರಿನಿಂದಲೇ ಪರಿಚಿತರಾಗಿದ್ದರು. ಅವರು ಉತ್ತರಪ್ರದೇಶದ ಎಟಾ (Etwa) ಎಂಬ ನಗರದಲ್ಲಿ ಡಿಸ್ಟ್ರಿಕ್ಟ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಕಾಳೀಕೃಷ್ಣರನ್ನು ಅಲ್ಲಿಗೆ ಕರೆದುಕೊಂಡು ಹೋದರೆ ಅವರಿಗೆ ಹವಾ ಬದಲಾವಣೆಯೂ ಆಗುತ್ತದೆ, ಪಥ್ಯದ ವ್ಯವಸ್ಥೆಯೂ ಆಗುತ್ತದೆ ಎಂದು ನಿರ್ಧರಿಸಿ ಬಾಬುರಾಮ್ ಮಹಾರಾಜರು ಹರಿಪ್ರಸನ್ನರಿಗೆ ಪತ್ರ ಬರೆದು ಎಲ್ಲ ಏರ್ಪಾಟನ್ನೂ ಮಾಡಿದರು.

---

೧.ಒಂದು ಬಗೆಯ ಅಫೀಮು.

ಹರಿಪ್ರಸನ್ನ ಮಹಾರಾಜರನ್ನು ಕಾಳೀಕೃಷ್ಣರು ಹಿಂದೆಂದೂ ನೋಡಿರಲಿಲ್ಲ. ಇದೇ ಮೊದಲ ಭೇಟಿ. P.W.D.ಯ ಒಂದು ದೊಡ್ಡ ಬಂಗಲೆಯಲ್ಲಿ ಅವರು ತಾವೊಬ್ಬರೇ ಇರುತ್ತಿದ್ದರು. ಅಲ್ಲಿ ಒಬ್ಬ ಅಡಿಗೆ ಬ್ರಾಹ್ಮಣ ಮತ್ತು ಆಳುಗಳಿದ್ದರು, ಅವರೇ ಗೃಹಕೃತ್ಯಗಳನ್ನೆಲ್ಲ ನೋಡಿಕೊಳ್ಳುತ್ತಿದ್ದರು. ಹರಿಪ್ರಸನ್ನ ಮಹಾರಾಜರು ಈ ವಿಷಯದಲ್ಲಿ ಹೆಚ್ಚು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಬಾಬುರಾಮ್ ಮಹಾರಾಜ್ ಮತ್ತು ಕಾಳೀಕೃಷ್ಣರನ್ನು ಅವರು ಆದರದಿಂದ ಸ್ವಾಗತಿಸಿದರು. ಸ್ಥಳೀಯ ಸಿವಿಲ್ ಸರ್ಜನ್‌ನಿಂದ ಕಾಳೀಕೃಷ್ಣರನ್ನು ಚೆನ್ನಾಗಿ ಪರೀಕ್ಷೆ ಮಾಡಿಸಿದರು. ಸರ್ಜನ್ ಪರೀಕ್ಷಿಸಿ, ''ಭಯ ಪಡಬೇಕಾದ್ದೇನಿಲ್ಲ; ಚೆನ್ನಾಗಿ ಊಟ, ವಿಶ್ರಾಂತಿ, ಮಿತವಾದ ನಡಿಗೆ ಮತ್ತು ಕುದುರೆ ಸವಾರಿ ಮಾಡಿದರೆ ಆರೋಗ್ಯ ಸುಧಾರಿಸುತ್ತದೆ'' ಎಂದು ಹೇಳಿದರು. ವೈದ್ಯರ ಮಾತಿನಿಂದ ಕಾಳೀಕೃಷ್ಣರು ಭರವಸೆ ಪಡೆದು, ಅವರ ಸಲಹೆಯಂತೆ ನಡೆಯತೊಡಗಿದರು. ಹರಿಪ್ರಸನ್ನ ಮಹಾರಾಜರಲ್ಲಿ ಒಂದು ಟಮ್ ಟಮ್ (ಕುದುರೆ ಹೂಡಿದ ಗಾಡಿ) ಇತ್ತು. ಆ ಕುದುರೆಯಲ್ಲಿ ಕಾಳೀಕೃಷ್ಣರು ಪ್ರತಿದಿನವೂ ಬೆಳಗ್ಗೆ ಸ್ವಲ್ಪ ಹೊತ್ತು ತಿರುಗಾಡಿ ಬರುತ್ತಿದ್ದರು. ಇದೇ ಅವರ ಮೊದಲ ಕುದುರೆ ಸವಾರಿಯಾದ್ದರಿಂದ ಕಾಸ್ತಾರನೊಬ್ಬ ಜೊತೆಗಿರುತ್ತಿದ್ದ. ಕಾಳೀಕೃಷ್ಣರು ಮೀನು, ಮಾಂಸ, ಹಾಲು ತುಪ್ಪಗಳನ್ನು ಹೆಚ್ಚಾಗಿ ತಿನ್ನ ಲಾರಂಭಿಸಿದರು. ಈ ಬಗೆಯ ವ್ಯವಸ್ಥೆಯ ಫಲವಾಗಿ ಅವರ ಆರೋಗ್ಯ ಶೀಘ್ರವಾಗಿ ಸುಧಾರಿಸಿತು. ಆದ್ದರಿಂದ ಬಾಬುರಾಮ್ ಮಹಾರಾಜ್ ಮತ್ತು ಕಾಳೀಕೃಷ್ಣರು ಮತ್ತೆ ಬೃಂದಾವನಕ್ಕೆ ಹಿಂದಿರುಗಿದರು.[೨]

ಬೃಂದಾವನಕ್ಕೆ ಮರಳಿದ ಕೆಲವು ದಿನಗಳಲ್ಲೇ ಸ್ವಾಮೀಜಿಯವರು ಡಿಸೆಂಬರ್ ತಿಂಗಳಲ್ಲಿ ಸ್ವದೇಶಕ್ಕೆ ಮರಳಲಿದ್ದಾರೆ ಎಂಬ ಸುದ್ದಿ ಬಂತು. ಅವರು ಕೊಲಂಬೋದಲ್ಲಿ ಇಳಿದು, ದಕ್ಷಿಣ ಭಾರತದ ಮೂಲಕ ಕಲ್ಕತ್ತೆಗೆ ಬರುವವರಿದ್ದರು. ಸ್ವಾಮೀಜಿಯವರನ್ನು ನೋಡಿ ಬಹಳ ಕಾಲವಾಯಿತು, ಈಗ ಅವರು ಪಾಶ್ಚಾತ್ಯ ದೇಶಗಳಲ್ಲಿ ವಿಜಯ ಸಾಧಿಸಿ ಬರುತ್ತಿದ್ದಾರೆ. ಮತ್ತೆ ಅವರೊಂದಿಗಿರುವ ಸೌಭಾಗ್ಯ ದೊರಕಲಿದೆ ಎಂದೆಲ್ಲ ಭಾವಿಸಿ ಬಾಬುರಾಮ್ ಮಹಾರಾಜರ ಮನಸ್ಸು ಆಲಂಬಜಾರ್ ಮಠಕ್ಕೆ ಹಿಂತಿರುಗಲು ಹಾತೊರೆಯಿತು. ಇತ್ತ ಬೃಂದಾವನ ಬಿಟ್ಟು ಹೋಗುವುದೂ ಅವರಿಗೆ ಕಷ್ಟವಾಗುತ್ತಿತ್ತು. ಅಂತೂ ಕೊನೆಗೆ ನರೇಂದ್ರನನ್ನು ನೋಡುವ, ಅವನೊಂದಿಗೆ ಒಡನಾಡುವ ಇಚ್ಛೆಯೇ ಗೆದ್ದಿತು; ಅವರು ಕೊಲ್ಕತ್ತೆಗೆ ಹಿಂದಿರುಗುವುದೆಂದೇ ತೀರ್ಮಾನಿಸಿದರು. ೧೮೯೬ರ ಡಿಸೆಂಬರ್ ಮಧ್ಯಭಾಗದಲ್ಲಿ ಅವರು ಕಾಳೀಕೃಷ್ಣರೊಂದಿಗೆ ಕೊಲ್ಕತ್ತೆಗೆ ಹೊರಟರು. ದಾರಿಯಲ್ಲಿ ರೈಲು ವರ್ಧಮಾನ್ ನಿಲ್ದಾಣದ ಹತ್ತಿರಕ್ಕೆ ಬಂದಾಗ ಬಾಬುರಾಮ್ ಮಹಾರಾಜರು ಕಾಳೀಕೃಷ್ಣರಿಗೆ, ''ನಡೆ, ಕಾಳೀಕೃಷ್ಣ, ಒಮ್ಮೆ ಶ್ರೀಮಾತೆಯವರ ದರ್ಶನ ಮಾಡಿ ಬರೋಣ'' ಎಂದರು. ಅನೇಕ ದಿನಗಳ ನಂತರ ಶ್ರೀಮಾತೆಯವರ ದರ್ಶನವಾಗುವುದೆಂದು ಭಾವಿಸಿ ಕಾಳೀಕೃಷ್ಣರು ತುಂಬ ಉಲ್ಲಸಿತರಾದರು. ವರ್ಧಮಾನದಲ್ಲಿ ಇಳಿದು, ಅಲ್ಲಿಂದ ಎತ್ತಿನಗಾಡಿಯಲ್ಲಿ ಕಾಮಾರಪುಕುರಕ್ಕೆ ಬಂದು ಒಂದು ದಿನ ಅಲ್ಲಿದ್ದು, ಮರುದಿನ ಜಯರಾಂಬಾಟಿ ತಲುಪಿದರು. ಅವರಿಬ್ಬರನ್ನೂ ನೋಡಿ ಶ್ರೀಮಾತೆಯವರು ತುಂಬ ಆನಂದಗೊಂಡರು. ಅವರು ಕೆಲವು ವಾರಗಳ ಕಾಲ ಜಯರಾಂಬಾಟಿಯಲ್ಲೇ ಇದ್ದರು. ಅಲ್ಲಿ ಬಾಬುರಾಮ್ ಮಹಾರಾಜರು ಕಾಳೀಕೃಷ್ಣರನ್ನು ಜೊತೆಯಲ್ಲಿ ಕರೆದುಕೊಂಡು ಆಗಿಂದಾಗ್ಗೆ ಶ್ರೀರಾಮಕೃಷ್ಣರ ಜೀವನಕ್ಕೆ ಸಂಬಂಧಪಟ್ಟ ಸ್ಥಳಗಳನ್ನು ಸಂದರ್ಶಿಸುತ್ತಿದ್ದರು. ಹೀಗೆ ಸಿಹೋರ್, ಶ್ಯಾಮಬಜಾರ್, ಮುಂತಾದ ಸ್ಥಳಗಳಿಗೂ, ಹಾಜರಾ ಮಹಾಶಯನ ಮೊರಗೋಡ ಗ್ರಾಮಕ್ಕೂ ಹೋಗಿದ್ದರು. ಕೆಲವೊಂದು ದಿನ ಕಾಮಾರಪುಕುರಕ್ಕೂ ಹೋಗುತ್ತಿದ್ದರು. ಬಾಬುರಾಮ್ ಮಹಾರಾಜರು ಠಾಕೂರರ ಲೀಲಾಸ್ಥಾನಗಳಲ್ಲೆಲ್ಲ ತಿರುಗಾಡಿ ಎಲ್ಲವನ್ನೂ ನೋಡುತ್ತಿದ್ದರು. ಶ್ರೀರಾಮಕೃಷ್ಣರ ಸ್ನೇಹಿತರು ಹಾಗೂ ಭಕ್ತರು ಯಾರಿದ್ದರೋ ಅವರನ್ನೂ ಭೇಟಿ ಮಾಡಿ, ಅವರಿಂದ ಶ್ರೀರಾಮಕೃಷ್ಣರ ವಿಚಾರಗಳನ್ನು ಕೇಳುತ್ತಿದ್ದರು. ಹಿಂದಿರುಗುವಾಗ ಇಬ್ಬರೂ ಶ್ರೀಮಾತೆಯವರಿಗಾಗಿ ಹಣ್ಣು-ತರಕಾರಿ, ಜಿಲೇಬಿ ಮತ್ತು ಮಿಠಾಯಿಗಳನ್ನು ಹೊತ್ತು ತರುತ್ತಿದ್ದರು. ಅವರು ಭಾರ ಹೊತ್ತು ತರುತ್ತಿದ್ದುದನ್ನು ಕಂಡು ಶ್ರೀಮಾತೆ, ''ಅಯ್ಯೋ, ಮಕ್ಕಳಿಗೆ ತುಂಬ ಕಷ್ಟವಾಗುತ್ತಿದೆ'' ಎಂದು ಆಕ್ಷೇಪಿಸುತ್ತಿದ್ದರು.

ಬೆಳಿಗ್ಗೆ ಬಾಬುರಾಮ್ ಮಹಾರಾಜ್ ಮತ್ತು ಕಾಳೀಕೃಷ್ಣರು ಶ್ರೀಮಾತೆಯವರ ಪೂಜೆಗಾಗಿ ಹೂವನ್ನು ಬಿಡಿಸಿಕೊಂಡು ಬರಲು ಹೋಗುತ್ತಿದ್ದರು. ಬಾಬುರಾಮ್ ಮಹಾರಾಜರಿಗೆ ಮರ ಹತ್ತಲು ಬರುತ್ತಿತ್ತು. ಕಾಳೀಕೃಷ್ಣರಿಗೆ ಬರುತ್ತಿರಲಿಲ್ಲ. ಒಂದೂವರೆ ಮೈಲಿ ದೂರದ ದೇಸರಾ ಗ್ರಾಮದ ಒಂದು ಕೊಳದಲ್ಲಿ ತುಂಬ ತಾವರೆ ಹೂಗಳು ಇರುವುದಾಗಿ ಅವರು ಕೇಳಿದ್ದರು. ಒಂದು ದಿನ ಬೆಳಗ್ಗೆ ಇಬ್ಬರೂ ಶ್ರೀಮಾತೆಯವರಿಗೆ ಗೊತ್ತಿಲ್ಲದಂತೆ ಅಲ್ಲಿಗೆ ಹೊರಟರು. ಕಾಳೀಕೃಷ್ಣರಿಗೆ ಈಜು ಗೊತ್ತಿಲ್ಲದ ಕಾರಣ ನೀರಿಗಿಳಿಯಲು ಭಯವಾಯಿತು. ಬಾಬುರಾಮ್ ಮಹಾರಾಜರು ಅವರನ್ನು ಕೊಳದ ಅಂಚಿನಲ್ಲಿ ನಿಲ್ಲಿಸಿ, ಚೌಕವೊಂದನ್ನು ಉಟ್ಟುಕೊಂಡು ಕೊಳಕ್ಕೆ

---

೨. ಹರಿಪ್ರಸನ್ನ ಮಹಾರಾಜರ ಆಫೀಸು ಸ್ನೇಹಿತರು ಅವರ ಬಂಗಲೆಯಲ್ಲಿ ಸಂಜೆಯ ಹೊತ್ತು ಸೇರುತ್ತಿದ್ದರು; ಬಾಬುರಾಮ್ ಮಹಾರಾಜರ ಸತ್ಸಂಗದಲ್ಲಿ ಕೆಲವು ಗಂಟೆಯನ್ನು ಆಧ್ಯಾತ್ಮಿಕ ಚರ್ಚೆಯಲ್ಲಿ ಆನಂದದಿಂದ ಕಳೆಯುತ್ತಿದ್ದರು. ಕಾಳೀಕೃಷ್ಣರು ತಮ್ಮ ಸ್ಮೃತಿಕಥೆಯಲ್ಲಿ ಬರೆಯುತ್ತಾರೆ:

''(ಅಲ್ಲಿಗೆ) ವಯಸ್ಸಾದ ಸ್ನೇಹಿತರೊಬ್ಬರು ಬರುತ್ತಿದ್ದರು; ಅವರದು ಹಾಸ್ಯ ಪ್ರವೃತ್ತಿ ಮತ್ತು ಎಲ್ಲರೊಡನೆಯೂ ಬೆರೆಯುವ ಸ್ವಭಾವ. ಇವರು ಸಿಪಾಯಿ ದಂಗೆಯ ಸಮಯದಲ್ಲಿ Army Transport Department (ಸೇನಾ ಸಾರಿಗೆ ವಿಭಾಗ) ದಲ್ಲಿದ್ದರು. ಸಿಪಾಯಿ ದಂಗೆಯ ಕಾಲದ ಅನೇಕ ರೋಮಾಂಚಕಾರಿ ಘಟನೆಗಳನ್ನು ಅವರು ಹೇಳುತ್ತಿದ್ದರು. ''ನಮ್ಮವರಲ್ಲಿ ಕೊನೆಯವರೆಗೂ ಒಗ್ಗಟ್ಟು ಎಂಬುದೇನಾದರೂ ಇದ್ದಿದ್ದರೆ, ಹಿಂದಿನಿಂದ 'ವಾಹ್ ಬಹದ್ದೂರ್! ಹೋರಾಡು ಬಹದ್ದೂರ್' ಎನ್ನುತ್ತಾ ಸೈನ್ಯವನ್ನು ಮುಂದೆ ಕಳುಹಿಸಿ, ಸೇನಾಪತಿಗಳು ಹಿಂದೆ (ದೂರದಲ್ಲಿ ಸುರಕ್ಷಿತವಾಗಿ) ಇರದೇ 'ಶಿರದಾರ್-ಸರದಾರ್' (ತಲೆ ತೆತ್ತವನೇ ಸರದಾರ) ಎಂಬ ನುಡಿಯಂತೆ ಜೀವನವನ್ನು ತುಚ್ಛಗೊಳಿಸಿ, ಮುನ್ನುಗ್ಗಿ ಹೋರಾಡಿದ್ದರೆ, ಈಗ ಸ್ವದೇಶಕ್ಕೆ ಹಿಂದಿರುಗಿ ಹೋಗಲು ಇಂಗ್ಲಿಷರಾರೂ ಉಳಿದಿರುತ್ತಿರಲಿಲ್ಲ.''

ಇಳಿದರು. ಒಂದೊಂದಾಗಿ ತಾವರೆ ಹೂಗಳನ್ನು ಕಿತ್ತು ಅವರ ಕೈಗೆ ಕೊಡಲಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲೇ ಅವರು ಬಹಳ ಗಾಬರಿಯಿಂದ ದಡಕ್ಕೆ ಜಿಗಿದರು. ಕಾಳೀಕೃಷ್ಣರು ಭಯಗೊಂಡು ನೋಡಿದರೆ, ೩-೪ ಇಂಚು ಉದ್ದವಾದ, ದಪ್ಪನೆಯ ೨೦-೩೦ ಜಿಗಣೆಗಳು ಬಾಬುರಾಮ್ ಮಹಾರಾಜರ ಸೊಂಟದಿಂದ ಹಿಡಿದು ಕಾಲಿನ ಬೆರಳವರೆಗೂ ಕಚ್ಚಿಕೊಂಡಿದ್ದವು. ಇಬ್ಬರೂ ಬೇಗ ಬೇಗನೆ ಜಿಗಣೆಗಳನ್ನು ಎಳೆದು ಬಿಡಿಸಲಾರಂಭಿಸಿದರು. ಅಷ್ಟರಲ್ಲಿ ದೇಹದ ಎಲ್ಲ ಜಾಗದಿಂದಲೂ ರಕ್ತ ಹರಿಯಲಾರಂಭಿಸಿತ್ತು. ತಾವರೆ ಹೂಗಳನ್ನು ನೋಡಿ ಶ್ರೀಮಾತೆಯವರು ತುಂಬ ಸಂತಸಪಟ್ಟರು. ಆದರೆ ಜಿಗಣೆಗಳ ಆಕ್ರಮಣದ ವಿಷಯ ಕೇಳಿ ತುಂಬ ನೊಂದುಕೊಂಡರು. ಇನ್ನೊಮ್ಮೆ ತಾವರೆ ಹೂಗಳನ್ನು ತರಲು ಹೋಗಕೂಡದೆಂದು ಕಟ್ಟಪ್ಪಣೆ ಮಾಡಿದರು.

ಜಯರಾಂಬಾಟಿಯಿಂದ ಇವರಿಬ್ಬರೂ ತಾರಕೇಶ್ವರಕ್ಕೆ ಬಂದು ಶಿವನ ದರ್ಶನ ಮಾಡಿ, ನಂತರ ಬಾಬುರಾಮ್ ಮಹಾರಾಜರ ಜನ್ಮಸ್ಥಳವಾದ ಆಂಟ್‌ಪುರದಲ್ಲಿ ಕೆಲವು ದಿನಗಳನ್ನು ಕಳೆದು, ಆಲಂಬಜಾರ್ ಮಠಕ್ಕೆ ಹಿಂತಿರುಗಿದರು.

೮

ಬಾಬುರಾಮ ಮಹಾರಾಜ್ ಮತ್ತು ಕಾಳೀಕೃಷ್ಣರು ಕೊಲ್ಕತ್ತಾ ತಲುಪುವಷ್ಟರಲ್ಲಿ ಸ್ವಾಮೀಜಿ ಅಲ್ಲಿಗೆ ಬಂದು ನಾಲ್ಕೈದು ದಿನಗಳೇ ಕಳೆದಿದ್ದವು (೨೦ ಫೆಬ್ರುವರಿ, ೧೮೯೭). ಕೊಲ್ಕತ್ತೆಯಲ್ಲಿ ಅವರಿಗಿತ್ತ ಅಭೂತಪೂರ್ವ ಸ್ವಾಗತವನ್ನು[೩] ಕಣ್ಣಾರೆ ನೋಡಲಾಗಲಿಲ್ಲವೆಂದು ಕಾಳೀಕೃಷ್ಣರ ಮನದಲ್ಲಿ ಖೇದವಾದರೂ, ಸ್ವಾಮೀಜಿಯವರನ್ನು ಸಾಕ್ಷಾತ್ತಾಗಿ ನೋಡಿದಾಗ ಸ್ತಂಭೀಭೂತರಾದರು. ಸ್ವಾಮೀಜಿ ಆಗ ಗುರುಭಾಯಿಗಳೊಂದಿಗೆ ಕುಳಿತು ಸಂಭಾಷಣೆ ನಡೆಸುತ್ತಿದ್ದರು. ಯಾರ ಬಗ್ಗೆ ಬಹಳಷ್ಟು ವಿಷಯಗಳನ್ನು ಕಾಳೀಕೃಷ್ಣರು ಇಷ್ಟು ದಿನ ಕೇಳಿದ್ದರೋ ಅವರೇ ಇಂದು ಸಶರೀರವಾಗಿ ಎದುರಿಗಿದ್ದರು. ಆ ಸಂದರ್ಭವನ್ನು ಕಾಳೀಕೃಷ್ಣರ ಮಾತುಗಳಲ್ಲಿ ಹೇಳುವುದಾದರೆ:

''ಯಾರ ಬಗ್ಗೆ ಬಹಳವಾಗಿ ಕೇಳಿದ್ದೆನೋ, ಅಮೆರಿಕಾದ ವೃತ್ತಪತ್ರಿಕೆಗಳ cutting ನಲ್ಲಿ ಓದಿದ್ದೆನೋ ಅವರೇ! ಅದೇ ಸಮ್ಮೋಹಕ ನೇತ್ರಗಳು! ಅವರ ಇಡೀ ಶರೀರದಿಂದ ಒಂದು ಜ್ಯೋತಿ ಹೊರಹೊಮ್ಮುತ್ತಿದ್ದಂತೆ ಭಾಸವಾಗುತ್ತಿತ್ತು. ಅದೇನು ಅಪರೂಪದ ಮೂರ್ತಿ! ಒಂದೇ ಆಧಾರದಲ್ಲಿ ಸೌಂದರ್ಯ ಮತ್ತು ಮಹಾಶಕ್ತಿಯ ಆಟ, ಒಂದು ರೀತಿಯ nonchalant (ಪ್ರಶಾಂತ) ಭಾವ, dazzling personality! (ಕಣ್ಣು ಕೋರೈಸುವ ವ್ಯಕ್ತಿತ್ವ)! ನನ್ನ first impression (ಪ್ರಥಮ ಭಾವನೆ) ಪ್ರೀತಿ-ಭಕ್ತಿ-ಭಯ ಮಿಶ್ರಿತ ಭಾವ.''

ಸ್ವಾಮೀಜಿಯವರು ಮೊದಲೇ ಗುರುಭಾಯಿಗಳಿಂದ ಕಾಳೀಕೃಷ್ಣರ ಬಗ್ಗೆ ಕೇಳಿದ್ದರು. ಕಾಳೀಕೃಷ್ಣರು ಪ್ರಣಾಮ ಸಲ್ಲಿಸಿದಾಗ, ಸ್ವಾಮೀಜಿಯವರು ಅವರನ್ನು ಸ್ನೇಹದಿಂದ ನೋಡಿ, ಗುರುಭಾಯಿಗಳ ಕಡೆಗೆ ತಿರುಗಿ, 'ಇವನು ಅದೇ ಹುಡುಗನಲ್ಲವೆ?' ಎಂದು ಕೇಳಿದರು. ಕಾಳೀಕೃಷ್ಣರ ನೆನಪುಗಳಲ್ಲಿ:

''ಆಗ ಸ್ವಾಮೀಜಿಯವರ ಮೈ ಬಣ್ಣ ಉಜ್ವಲವಾಗಿತ್ತು. ಮುಖಮಂಡಲವು ಸರ್ವದಾ ಒಂದು ಅಪೂರ್ವ ಭಾವ ಮತ್ತು ತೇಜಸ್ಸಿನಿಂದ ಕೂಡಿ ಪ್ರಜ್ವಲಿಸುತ್ತಿತ್ತು. ಅವರ ಜ್ಯೋತಿರ್ಮಯ ನೇತ್ರಗಳನ್ನು ನೇರವಾಗಿ ನೋಡಲಾಗುತ್ತಿರಲಿಲ್ಲ, ಏಕೆಂದರೆ ಕಣ್ಣುಗಳು ಸಂಧಿಸಿದರೆ ನಮ್ಮ ಕಣ್ಣೆಲ್ಲಿ ಕಮರಿಹೋಗುವುದೋ ಎನಿಸುತ್ತಿತ್ತು. ಯಾವಾಗ ಅವರು ಕೌಪೀನವನ್ನು ಮಾತ್ರ ಧರಿಸಿ, ಒಳಮನೆಯ ತಾರಸಿಯಲ್ಲಿ ಭಗವದ್ಭಾವದಲ್ಲಿ ಮತ್ತರಾಗಿ ಸಿಂಹದಂತೆ ನಡೆದಾಡುತ್ತಿದ್ದರೋ, ಆಗ ಅವರು ಆಧ್ಯಾತ್ಮಿಕ ಜಗತ್ತಿನ ನೆಪೋಲಿಯನ್ ಎಂದೆನಿಸುತ್ತಿತ್ತು. ಅವರ ಹೆಜ್ಜೆ ಹೆಜ್ಜೆಗೂ ಭೂಮಿ slipping from under his feet (ಜಗತ್ತು ಪಾದದಡಿಯಿಂದ ಸರಿದು ಹೋಗುತ್ತಿದೆಯೇನೋ), ನೆಲ ನಡುಗುತ್ತಿದೆಯೇನೋ, ಒಂದು ಮಹಾಶಕ್ತಿಯು ಅನವರತ ಸ್ಫುರಿಸಿ, ಸಿಡಿದೇಳುತ್ತಿದೆಯೇನೋ ಎಂದೆನಿಸುತ್ತಿತ್ತು. ಮೊದಮೊದಲು ಅವರನ್ನು ನೋಡಿದರೆ ಬಹಳ ಭಯವಾಗುತ್ತಿತ್ತು. 'ಏನೋ ಮಾಡಲು ಹೋಗಿ ಮತ್ತೇನೋ ತಪ್ಪಾದರೆ, ಅದರಿಂದ ಅವರು ಅಸಂತುಷ್ಟರಾದರೆ!' ಎಂದು ಭಾವಿಸಿ ಅವರ ಹತ್ತಿರ ಹೆಚ್ಚಾಗಿ ಸುಳಿಯುತ್ತಿರಲಿಲ್ಲ. ಆದಷ್ಟೂ ಅವರ ಹತ್ತಿರ ಸ್ವಲ್ಪ ಸಮಯವೇ ಇರುತ್ತಿದ್ದೆ, ಇಲ್ಲವೇ ಸ್ವಲ್ಪ ಮರೆಯಾಗಿ ಕುಳಿತುಕೊಳ್ಳುತ್ತಿದ್ದೆ.''

ಸ್ವಾಮೀಜಿಯವರು ಹಗಲುಹೊತ್ತು ಕಾಶೀಪುರದ ಗೋಪಾಲ್‌ಲಾಲ್ ಶೀಲರ ತೋಟದ ಮನೆಯಲ್ಲಿರುತ್ತಿದ್ದರು. ಸಂಜೆ ತಮ್ಮ ಗುರುಭಾಯಿ ಮತ್ತು ಶಿಷ್ಯರೊಂದಿಗೆ ಕಾಶೀಪುರದಿಂದ ಸುಮಾರು ಎರಡೂವರೆ ಮೈಲಿ ದೂರದ ಆಲಂಬಜಾರ್ ಮಠಕ್ಕೆ ಮಾತುಕತೆಯಾಡುತ್ತಾ ನಡೆದುಕೊಂಡು ಬರುತ್ತಿದ್ದರು. ಮಠಕ್ಕೆ ಬಂದು ಬಟ್ಟೆಬರೆ ಬಿಸುಟು, ಕೇವಲ ಕೌಪೀನದಲ್ಲಿ ಇರುತ್ತಿದ್ದರು. ಒಂದೊಂದು ದಿನ ತುಂಬ ಹೊತ್ತಾಗಿಬಿಟ್ಟರೆ ಅಥವಾ ಆಯಾಸವೆನಿಸಿದರೆ ಶೀಲರ ತೋಟದಲ್ಲೇ ರಾತ್ರಿಹೊತ್ತು ಇದ್ದುಬಿಡುತ್ತಿದ್ದರು. ಅಲ್ಲಿ ಪ್ರತಿದಿನವೂ ಸ್ವಾಮೀಜಿಯವರ ದರ್ಶನ ಮಾಡಲು ಮತ್ತು ಅವರ ಮಾತುಗಳನ್ನು ಕೇಳಲು ಬಹಳ ಜನ ಕಾತರರಾಗಿ ಸೇರುತ್ತಿದ್ದರು. ಮಠಕ್ಕೆ ಬಂದ ಮೇಲೂ ವಿರಾಮವಿಲ್ಲದೆ, ಗುರುಭ್ರಾತರೊಂದಿಗೆ ನಗು, ತಮಾಷೆ, ಕಥೆ ಹಾಗೂ ನಾನಾಬಗೆಯ ಮಾತುಕತೆಗಳಲ್ಲಿ ತೊಡಗುತ್ತಿದ್ದರು.

*(ಮುಂದುವರಿಯುವುದು)*

---

೩. ಸ್ವಾಮೀಜಿ ಕೊಲ್ಕತ್ತಾ ತಲುಪಿದ ಒಂದು ವಾರದ ನಂತರ, ಅಂದರೆ ಫೆಬ್ರುವರಿ ೨೮ರಂದು ಶೋಭಾಬಜಾರ್‌ನ ಅರಮನೆಯಲ್ಲಿ ರಾಜಾ ವಿನಯಕೃಷ್ಣ ದೇವರ ಅಧ್ಯಕ್ಷತೆಯಲ್ಲಿ ಸ್ವಾಮೀಜಿಯವರ ಸ್ವಾಗತ ಸಭೆ ಜರುಗಿತು. ಅದರಲ್ಲಿ ಅನೇಕ ಮಂದಿ ಪ್ರತಿಷ್ಠಿತರೂ, ವಿಶಿಷ್ಟ ನಾಗರಿಕರೂ, ಬ್ರಾಹ್ಮಣ ಪಂಡಿತರೂ, ನೂರಾರು ಮಂದಿ ಕಾಲೇಜು ವಿದ್ಯಾರ್ಥಿಗಳೂ ಭಾಗವಹಿಸಿದ್ದರು. ತಮ್ಮ ಭಾಷಣದ ಕೊನೆಯಲ್ಲಿ ಸ್ವಾಮೀಜಿ ಬಂಗಾಳದ ಯುವಕರನ್ನು ಉದ್ದೇಶಿಸಿ ಸ್ಫೂರ್ತಿದಾಯಕವಾದ ಮಾತುಗಳನ್ನು ಆಡಿದರು. *(ನೋಡಿ: ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೧೮೦-೯೧)*